ಕೂಡಾ ಸುಬ್ಬ. ಹಗಲಿನಲ್ಲಿ ಪಾತಜ್ಜಿಯೂ ಅವನೂ ಜೊತೆ ಜೊತೆಗೇ ಕೆಲಸ ಮಾಡುವವರು. ಒಬ್ಬಂಟಿ ಅಜ್ಜಿಗ್ಯಾಕೆ ದುಡ್ಡು? ದುಡಿದು ಮೂಟೆ ಹಾಕಿದ್ದಾಳೆ. ದೋಚಿ ಎಲ್ಲವನ್ನೂ ತಾನು ಗಂಟು ಕಟ್ಟಿಕೊಳ್ಳಬೇಕು ಎಂಬ ದುರಾಸೆಯಲ್ಲಿ ಅವಿತು ಕೂತ ಕಳ್ಳ ಅಜ್ಜಿ ಮಲಗುವುದನ್ನೇ ಹೊಂಚಿ ಕಾಯುತ್ತಿದ್ದ. ಈಗಲಂತೂ ಅಜ್ಜಿ ಆತನ ಹೆಸರು ಹಿಡಿದು ಕರೆದು ಯಜಮಾನರಿಗೆ ಹೇಳುತ್ತೇನೆ ಎಂದಾಗ ಅವನ ಜಂಘಾಬಲ ಉಡುಗಿತು. ಅಜ್ಜಿ ಹೇಳಿದಂತೆ ಜಮೀನುದಾರರಿಗೆ ತಾನು ಆಕೆಯ ಮನೆಗೆ ಕಳ್ಳತನ ಮಾಡಲು ಬಂದಿದ್ದು ಅಂತ ದೂರು ಕೊಟ್ಟಿದ್ದೇ ಆದರೆ ಉಂಟಾಗಬಹುದಾದ ತೊಂದರೆಗಳ ನೆನಪಿನಲ್ಲಿ ಅವನ ಮೋರೆ ಕಪ್ಪಡರಿತು. ಆ ತನಕ ಹೋಗಲು ಬಿಡುವುದು ಬುದ್ಧಿವಂತಿಕೆಯಲ್ಲವೆಂಬ ಅರಿವು ಮೂಡಿತು ಅವನಿಗೆ.

ಪಾತಜ್ಜಿ ಕೋಪಿಷ್ಟೆಯಲ್ಲ. ಬುದ್ಧಿಗೆಟ್ಟು ಮಣ್ಣುತಿನ್ನುವ ಕೆಲಸ ಮಾಡಿದೆ. ಬೆಳಗಾದರೆ ಅನಾಥ ಮುದುಕಿಯ ಮನೆಯನ್ನೂ ಸುಬ್ಬ ಬಿಡಲಿಲ್ಲವೆಂದು ಊರಿನವರಿಗೆಲ್ಲ ಗೊತ್ತಾದರೆ ಜನರು ಊರು ಬಿಟ್ಟು ಓಡಿಸುವುದು ಹೌದು. ಸಮಯ ಮೀರುವ ಮೊದಲೇ ಸರಿಪಡಿಸಿಕೊಳ್ಳುವುದು ಬುದ್ಧಿವಂತಿಕೆ. ನೇರ ಹೋಗಿ ಪಾತಜ್ಜಿಯ ಕಾಲಿಗೆ ಬಿದ್ದರೆ ತಪ್ಪೇನು ಅದರಲ್ಲಿ. ಮತಿಗೆಟ್ಟು ಬಂದೆ ಅಂದರೆ ಆಕೆ ಕ್ಷಮಿಸದೆ ಬಿಡಲಾರಳು. ಇನ್ನು ತಡ ಮಾಡುವುದು ಸರಿಯಲ್ಲ. ಕಳ್ಳ ಹೀಗೆ ಯೋಚಿಸುತ್ತ ತುಸು ಮುಂದೆ ಕಾಲಿಟ್ಟನು. ಅಜ್ಜಿಯ ದನಿ ಕೇಳಿಸಿತಾಗ.

‘ಬಾ ಬಾ. ಬಂದು ಕೂತುಕೋ. ವೀಳ್ಯವೆಲ್ಲ ಮುಗಿದರೆ ಮತ್ತೆ ನಿನಗೇ ಇಲ್ಲ. ಅದ್ಯಾಕೋ ಅಷ್ಟು ಹಿಂದೆ ಮುಂದೆ ಜರುಗುತ್ತಿದ್ದಿ? ಏನಾಗಿದೆ ? ಅದಾದರೂ ಹೇಳು’ ಎಂದಳು.

ಇನ್ನು ತಡೆಯಲಿಲ್ಲ ಸುಬ್ಬನಿಗೆ. ದಿಢೀರನೆ ಬಾಗಿಲು ನೂಕಿ ಒಳಗೆ ಬಂದನು. ಧಾವಿಸಿ ಬಂದು ಗೋಡೆಗೊರಗಿ ಕುಳಿತ ಅಜ್ಜಿಯ ಕಾಲಿಗೆ ಬಿದ್ದನು. ಇದೆಲ್ಲಿಂದ ಬಂದನೀತ ಎಂದು ಅಚ್ಚರಿಯಿಂದ ನೋಡಿದಳು ಅಜ್ಜಿ. ಬೆಕ್ಕಸ ಬೆರಗಾದರೂ ಆಕೆ ಸಾವರಿಸಿಕೊಂಡಳು. ಲೋಕ ಕಂಡ ಅಜ್ಜಿ ಆಕೆ. ಸುಬ್ಬನ ಬಗ್ಗೆ ಅಲ್ಲಿ, ಇಲ್ಲಿ ಎದ್ದ ಗುಸುಗುಸು ಕೇಳಿ ಗೊತ್ತಿತ್ತು. ಈ ಮಳೆಯ ಇರುಳಿನಲ್ಲಿ ಗುಡ್ಡದ ತುದಿಯ ತನ್ನ ಗುಡಿಸಲಿನ  ಎದುರಿಗೆ ಬರುವ ನೊಣ ಕೂಡಾ ಇಲ್ಲ. ಹಾಗಿದ್ದ ಮೇಲೆ ಈತ ಬಂದಿರುವುದು ಕಂಡರೆ ಅನುಮಾನವಿಲ್ಲ. ಬೆಕ್ಕನ್ನು ಮುದ್ದು ಮಾಡುತ್ತ ಕರೆದ ‘ಸುಬ್ಬ’ ಎಂಬ ಹೆಸರು ಕೇಳಿ ತಾನು ಅವನು ಹೊಂಚು ಹಾಕಿದ್ದು ಕಂಡು ಕರೆದೆ ಎಂದೇ ತಪ್ಪಾಗಿ ಅರ್ಥೈಸಿ ನಿರ್ವಾಹವಿಲ್ಲದೆ  ಕಾಲಿಗೆ ಬೀಳಲು ಮುಂದಾಗಿದ್ದಾನೆ; ಇದರ ಹಿಂದೆ ಜಮೀನುದಾರರ ಭೀತಿ ಕಾರಣ.

ಅಜ್ಜಿ ಬಲು ಚತುರೆ. ಆಕೆ ಏನೂ ತಿಳಿಯದವಳ ಹಾಗೆ ಸುಬ್ಬನನ್ನು ಕರೆದು ವೀಳ್ಯ ಕೊಟ್ಟಳು. ‘ಅದೇನಪ್ಪಾ, ಈ ಮಳೆಯ ರಾತ್ರಿಯಲ್ಲಿ ಇತ್ತ ಬಂದೆ. ಏನಾಗಬೇಕಿತ್ತು. ನನಗೆ ಪಕ್ಕನೆ ನೀನು ಬಂದಿದ್ದು ಕಾಣುವಾಗ ಕಳ್ಳರೇನಾದರೂ ನುಗ್ಗಿದರಾ ಅಂತ ಹೆದರಿಕೆ ಆಯ್ತು ನೋಡು. ನಮ್ಮ ಸುಬ್ಬನಿದ್ದರೆ ಇನ್ನು ಹೆದರಿಕೆ ಎಲ್ಲಿಂದ? ಹಾಗೆ ಒಂದು ವೇಳೆ ಕದಿಯುವ ಉದ್ದೇಶದಿಂದ ಕಳ್ಳ ಬಂದರೆ ಇಲ್ಲೇನಿದೆ? ಮಣ್ಣು ಅಷ್ಟೆ. ಪುಡಿಗಾಸೆಲ್ಲ ಯಜಮಾನಿ ಹತ್ತಿರ ಇಟ್ಟುಕೊಳ್ಳಲು ಕೊಟ್ಟಿದ್ದೇನೆ. ಅದ್ಯಾವ ಧೈರ್ಯದಲ್ಲಿ ನಾನು ಈ ಗುಡಿಸಲಿನಲ್ಲಿ ಮಡಗಿಕೊಳ್ಳಲಿ ಹೇಳು?’ ಎಂದಳು.

‘ಹೌದು ಅಜ್ಜಿ. ನಮ್ಮ ಕರು ಹುಲ್ಲು ಮೇಯಲು ಬಿಟ್ಟಿದ್ದು ಇನ್ನೂ ಮನೆಗೆ ಬರಲಿಲ್ಲ. ಅದನ್ನು ಹುಡುಕುತ್ತ ಹುಡುಕುತ್ತ ಇತ್ತ ಬಂದೆ. ಮಳೆಗೆ ಚಳಿ ಆಯ್ತು ನೋಡು. ಬೆಚ್ಚಗೆ ಒಂದು ವೀಳ್ಯ ತಿನ್ನಲು ಬಂದೆ. ರಾತ್ರಿ ಸಾಕಷ್ಟಾಯಿತು. ನಾನಿನ್ನು ಮನೆಗೆ ಹಿಂದಿರುಗುತ್ತೇನೆ’ ಎಂದು ಸುಬ್ಬ ಎದ್ದನು.

ಪಾತಜ್ಜಿ ತನ್ನನ್ನು ಕಂಡು ತಪ್ಪಾಗಿ ತಿಳಿಯಲಿಲ್ಲವೆಂದು ನಂಬಿಕೆ ಬಂದಾಗ ಹಗುರವಾಯಿತು. ಆತ ಹೊರಗೆ ದೌಡಾಯಿಸಿದನು. ಸುಬ್ಬ ಧಾವಿಸಿದ ಪರಿ ಕಂಡು ಪಾತಜ್ಜಿ ಮಡಿಲಿನಲ್ಲಿ ಬಂದು ಕೂತ ಬೆಕ್ಕನ್ನು ಸವರುತ್ತ  ಗಲಗಲನೆ ನಕ್ಕಳು.

**- ಕೃಷ್ಣವೇಣಿ ಕಿದೂರ**

# ಒಂಟಿ ಬಾಲಕಿಯ ಹಾಡು!



ಮನಸ್ಸಿನ ಮಂಜಿನ ಪರದೆಯ ಸರಿಸಿ
ಕನಸಿನ ಕಣ್ಣನು ಅರಳಿಸಿ ನೋಡಿ
ಅಂಜುತ ಅಳುಕುತ ಬೆಚ್ಚುತ, ಬೆದರುತಾ
ಹಾಡುತ ಕಾಡುತ ಕಾಯುತ ನಗುತಾ
ಇರುವೆನು ನಾನಿಲ್ಲಿ, ಒಬ್ಬಳೇ ಮನೆಯಲ್ಲಿ

ಮಳೆಯು ಬಂದರೆ ಅಬ್ಬಾ ಚಳಿ ಚಳಿ
ಗುಡುಗು ಬಂದರೆ ಅಮ್ಮಾ ಭಯ ಭಯ
ಭರ ಭರ ಗಾಳಿ ಎದೆಯಲಿ ಡವಡವ
ಅಡಗಲಿ ನಾನೆಲ್ಲಿ? ಈ ಭೂತದ ಮನೆಯಲ್ಲಿ?

ಗುಬ್ಬಚ್ಚಿ ಚಿಟ್ಟೆ ಪತಂಗ ನೂರು
ಹೂ ಮಿಡಿ ಕಾಯಿ ಹಣ್ಣಿವೆ ಜೋರು
ಮರಗಳ ಹತ್ತಿ ಹಾರುತ ಕುಣಿದು
ಆಡಲು ಹಾಡಲು ಗೆಳೆಯರೇ ಸಿಗರು
ಹುಡುಕಲಿ ನಾನೆಲ್ಲಿ? ಹೋಗಲಿ ನಾನೆಲ್ಲಿ?

ರಾತ್ರಿಯು ಬರಲಿ ನಗುವನು ಚಂದಿರ
ಸುತ್ತಲೂ ಸಾವಿರ ಚಿಕ್ಕೆಯ ಹಂದರ
ವಟ ವಟ ಕಪ್ಪೆ, ಜಿಟಿ ಜಿಟಿ ಮಳೆ ಹನಿ
ಬರುವಿರಾ ನೀವಿಲ್ಲಿ? ಆಡಲು ಜೊತೆಯಲ್ಲಿ

ಯಾರೋ ಬರುವರು, ಗುಸು ಗುಸು ಪಿಸು ಪಿಸು
ಒಳಗೇ ಬಾರದೆ ತಿರುಗೇ ನೋಡರು
ಪುಟಾಣಿ ಮಕ್ಕಳು ಬೀದಿಯ ಮಕ್ಕಳು
ಕಾರಲಿ ಬಸ್ಸಲಿ ಬರುವವರೆಲ್ಲ
ನಿಲ್ಲುವರಾರಿಲ್ಲ.. ಹೋಗುವರೇ ಎಲ್ಲ

**- ರೇಖಾ ಕುಂದಾರು, ತುರುವೇಕೆರೆ**